"ಮಧುರ ಮಕ್ಕಳೇ - ನಿಮ್ಮ ಬುದ್ಧಿಯು ಖುಷಿಯಿಂದ ಸದಾ ಸಂಪನ್ನವಾಗಿರಬೇಕು ಏಕೆಂದರೆ ನೀವೀಗ ತಂದೆಯ ಸಮಾನ ಮಾಸ್ಟರ್ ಜ್ಞಾನಪೂರ್ಣರಾಗಿದ್ದೀರಿ"

ಪ್ರಶ್ನೆ: ನೀವು ಮಕ್ಕಳು 21 ಜನ್ಮಗಳಿಗಾಗಿ ಯಾವ ಆಧಾರದ ಮೇಲೆ ಸಂಪನ್ನರಾಗಿರುವಿರಿ?

ಉತ್ತರ: ಸಂಗಮಯುಗದಲ್ಲಿ ನೀವು ನೇರವಾಗಿ ತಂದೆಗೆ ತಮ್ಮ ಸರ್ವಸ್ವವನ್ನು ಕೊಡುತ್ತೀರಿ. ಎಲ್ಲವನ್ನು ತಂದೆಗೆ ಅರ್ಪಣೆ ಮಾಡಿಬಿಡುತ್ತೀರಿ. ಇದಕ್ಕೆ ಪ್ರತಿಯಾಗಿ ನೀವು 21 ಜನ್ಮಗಳಿಗಾಗಿ ಸಂಪನ್ನರಾಗಿಬಿಡುತ್ತೀರಿ. ತಂದೆಯು ತಿಳಿಸುತ್ತಾರೆ - ಈ ಸಮಯದಲ್ಲಿ ನಿಮ್ಮ ಬಳಿ ಏನೆಲ್ಲಾ ಹಳೆಯ ಕಸ ಇದೆಯೋ ಅದನ್ನು ನನಗೆ ಕೊಟ್ಟುಬಿಡಿ. ಶರೀರ ಬಿಡುವ ಮುಂಚೆ ತಮ್ಮ ಸರ್ವಸ್ವವನ್ನು ವರ್ಗಾವಣೆ ಮಾಡಿಬಿಡಿ ಆಗ ಭವಿಷ್ಯದಲ್ಲಿ ಅದಕ್ಕೆ ಪ್ರತಿಯಾಗಿ ದೊರೆಯುವುದು.

ಗೀತೆ: ಓಂ ನಮೋ ಶಿವಾಯ..................

ಓಂ ಶಾಂತಿ. ಸಾಲಿಗ್ರಾಮಗಳ ಪ್ರತಿ ಶಿವಭಗವಾನುವಾಚ, ಆತ್ಮಿಕ ಮಕ್ಕಳ ಪ್ರತಿ ಆತ್ಮಿಕ ತಂದೆಯು ತಿಳಿಸುತ್ತಾರೆ. ಇಲ್ಲಿ ತಮ್ಮನ್ನು ತಾವು ಆತ್ಮನೆಂದು ತಿಳಿದು ಕುಳಿತುಕೊಳ್ಳಬೇಕು, ಶರೀರವೆಂದಲ್ಲ ಎಂದು ಈಗ ನೀವು ಮಕ್ಕಳಿಗೆ ಗೊತ್ತಿದೆ. ಇಡೀ ಪ್ರಪಂಚದಲ್ಲಿ ಆತ್ಮವೇನು ಎಂಬುದು ತಿಳಿದುಕೊಂಡಿರುವ ಮನುಷ್ಯರು ಒಬ್ಬರೂ ಸಹ ಇಲ್ಲ. ಆತ್ಮನನ್ನೇ ಅರಿತುಕೊಂಡಿಲ್ಲವೆಂದ ಮೇಲೆ ಪರಮಾತ್ಮನನ್ನು ಹೇಗೆ ತಿಳಿದುಕೊಳ್ಳುತ್ತಾರೆ? ತಂದೆಯ ಮುಖಾಂತರವೇ ಆತ್ಮದ ತಿಳುವಳಿಕೆಯು ಸಿಗುತ್ತದೆ. ಆತ್ಮ ಮತ್ತು ಪರಮಾತ್ಮನನ್ನು ಅರಿತುಕೊಂಡಿಲ್ಲ. ಆದ್ದರಿಂದಲೇ ಮನುಷ್ಯರು ದುಃಖಿ ಆಗಿದ್ದಾರೆ. ಈಗ ನೀವು ಮಕ್ಕಳಿಗೆ ಈ ತಿಳುವಳಿಕೆ ಇದೆ. ಈ ನಾಟಕದ ಅಥವಾ ಕಲ್ಪದ ಆಯಸ್ಸು 5000 ವರ್ಷಗಳಾಗಿವೆ. ಇದಂತೂ ಗೊತ್ತಿದೆ. ಒಂದುವೇಳೆ ಆ ಸ್ಥೂಲ ಬೀಜವು ಚೈತನ್ಯವಾಗಿದ್ದರೆ ಬೀಜವಾದ ನನ್ನಿಂದ ವೃಕ್ಷವು ಈರೀತಿ ಬೆಳೆಯಿತೆಂದು ತಿಳಿಸುತ್ತಿತ್ತು ಅಲ್ಲವೆ. ಅದಂತೂ ಜಡಬೀಜವಾಗಿದೆ. ಇದು ಚೈತನ್ಯ ಒಂದೇ ಮನುಷ್ಯ ಸೃಷ್ಟಿಯ ವಿಭಿನ್ನ ವೃಕ್ಷವಾಗಿದೆ. ನೀವು ಮಕ್ಕಳಿಗೆ ಈಗ ಪೂರ್ಣ ಜ್ಞಾನವಿದೆ. ನಿಮ್ಮಲ್ಲಿಯೂ ಸಹ ನಂಬರ್‌ವಾರ್ ಪುರುಷಾರ್ಥದನುಸಾರ ಆದಿಯಿಂದ ಅಂತ್ಯದವರೆಗಿನ ಇಡೀ ವೃಕ್ಷದ ಜ್ಞಾನವು ದೊರಕಿದೆ. ಹೇಗೆ ಬೀಜದಲ್ಲಿ ಇಡೀ ವೃಕ್ಷದ ಜ್ಞಾನವಿರುತ್ತದೆಯೋ ಹಾಗೆಯೇ ಈ ತಂದೆಯು ಚೈತನ್ಯ ಬೀಜರೂಪವಾಗಿದ್ದಾರೆ. ಪರಮಪಿತ ಪರಮಾತ್ಮ ಸತ್ಚಿತ್ ಆನಂದ ಸ್ವರೂಪನೆಂದು ಗಾಯನವಿದೆ. ನಿರಾಕಾರನ ಮಹಿಮೆಯನ್ನೇ ಗಾಯನ ಮಾಡಲಾಗುತ್ತದೆ. ಅವರ ಮಹಿಮೆಯು ಎಲ್ಲರಿಗಿಂತ ಪೂರ್ಣ ಭಿನ್ನವಾಗಿದೆ. ಮನುಷ್ಯರಂತೂ ಏನೂ ತಿಳಿದುಕೊಂಡಿಲ್ಲ. ಭಲೆ ದೇವತೆಗಳಿಗೆ ಈ ಆಸ್ತಿಯು ಇಲ್ಲಿಂದಲೇ ಸಿಗುತ್ತದೆ. ಆದರೆ ಅವರಿಗೂ ಸಹ ಸತ್ಯಯುಗದಲ್ಲಿ ಈ ಜ್ಞಾನ ಇರುವುದಿಲ್ಲ. ಆಶ್ಚರ್ಯದ ಮಾತಾಗಿದೆಯಲ್ಲವೇ. ಇಲ್ಲಿ ನಿಮಗೆ ಎಲ್ಲಾ ಜ್ಞಾನವು ಸಿಗುತ್ತದೆ. ಈ ಸೃಷ್ಟಿ ಚಕ್ರವು ಹೇಗೆ ಸುತ್ತುತ್ತದೆ ಎಂದು ಎಲ್ಲಾ ಜ್ಞಾನವು ಬುದ್ಧಿಯಲ್ಲಿ ಇದೆ. ತಂದೆ ಬಂದು ಹೊಸ ರಾಜಧಾನಿಯನ್ನು ಸ್ಥಾಪನೆ ಮಾಡುತ್ತಾರೆ. ನೀವು ಈ ನಾಟಕದ ಪಾತ್ರಧಾರಿಗಳಾಗಿದ್ದೀರಿ. ಕೇವಲ ನಿಮಗಷ್ಟೇ ನಾಟಕದ ಆದಿ-ಮಧ್ಯ-ಅಂತ್ಯ, ರಚಯಿತ ಮತ್ತು ರಚನೆಯ ಜ್ಞಾನವಿದೆ ಮತ್ತ್ಯಾರಿಗೂ ಇಲ್ಲ. ಶೂದ್ರವರ್ಣದವರಿಗಾಗಲಿ, ದೇವತಾವರ್ಣದವರಿಗಾಗಲಿ ಈ ಜ್ಞಾನವಿಲ್ಲ. ಈ ಜ್ಞಾನವನ್ನು ಯಾರಾದರೂ ಕೇಳಿದರೆ ಆಶ್ಚರ್ಯಚಕಿತರಾಗುತ್ತಾರೆ. ಯಾವ ಹಬ್ಬಗಳನ್ನು ಇಲ್ಲಿ ಆಚರಿಸುತ್ತಾರೋ ಅವೆಲ್ಲವು ಪರಂಪರೆಯಿಂದ ನಡೆದುಬಂದಿದೆ ಎಂದು ಮನುಷ್ಯರು ಹೇಳುತ್ತಾರೆ. ಆದರೆ ತಂದೆಯು ತಿಳಿಸುತ್ತಾರೆ - ಸತ್ಯಯುಗದಲ್ಲಂತೂ ಈ ಹಬ್ಬಗಳು ಇರುವುದಿಲ್ಲ. ಹಬ್ಬಗಳನ್ನು ಯಾರೂ ಅರಿತುಕೊಂಡೇ ಇರಲಿಲ್ಲ. ಈಗಂತೂ ಈ ದಸರಾ, ದೀಪಾವಳಿ ಮುಂತಾದ ಹಬ್ಬಗಳು ಬರಲಿವೆ ಎಂದು ಹೇಳುತ್ತಾರಲ್ಲವೆ ಆದರೆ ಸತ್ಯಯುಗದಲ್ಲಂತೂ ಇವೇನೂ ನೆನಪಿರುವುದಿಲ್ಲ. ಸಂಪೂರ್ಣ ನಿಶ್ಚಿಂತರಾಗಿ ರಾಜ್ಯ ಮಾಡುತ್ತಿರುತ್ತಾರೆ.

ಈಗ ನಿಮ್ಮ ಬುದ್ಧಿಯ ಬೀಗವು ತೆರೆಯಲ್ಪಟ್ಟಿದೆ. ನೀವು ಪಾತ್ರಧಾರಿಗಳಾಗಿದ್ದೀರಿ. ಈ ನಾಟಕದ ರಚಯಿತ, ನಿರ್ದೇಶಕ, ಮುಖ್ಯ ಪಾತ್ರಧಾರಿಗಳು, ಕಾಲಾವಧಿ ಇತ್ಯಾದಿಗಳನ್ನು ತಿಳಿದುಕೊಂಡಿದ್ದೀರಿ. ಈ ಜ್ಞಾನವು ಯಾರ ಬುದ್ಧಿಯಲ್ಲಿ ಇರುವುದೋ ಅವರಿಗೆ ಅಪಾರ ಖುಷಿ ಇರುವುದು. ಪರಮಪಿತ ಪರಮಾತ್ಮನನ್ನೇ ಜ್ಞಾನಪೂರ್ಣ, ಜ್ಞಾನಸಾಗರನೆಂದು ಹೇಳಲಾಗುತ್ತದೆ. ಯಾವ ಜ್ಞಾನವಿದೆ? ನಿಮ್ಮ ವಿನಃ ಮತ್ತ್ಯಾರೂ ತಿಳಿದುಕೊಂಡಿಲ್ಲ. ಪರಮಾತ್ಮನನ್ನೇ ಜ್ಞಾನಸಾಗರ, ಸರ್ವಶಕ್ತಿವಂತನೆಂದು ಕರೆಯಲಾಗುವುದು. ಅಂದಮೇಲೆ ಯಾವುದರ ಜ್ಞಾನ? ಎಲ್ಲಾ ವೇದ-ಶಾಸ್ತ್ರ, ಗ್ರಂಥ, ಸೃಷ್ಟಿಯ ಆದಿ-ಮಧ್ಯ-ಅಂತ್ಯದ ಜ್ಞಾನವಾಗಿದೆ. ಶಾಸ್ತ್ರದಲ್ಲಿ ಈ ಜ್ಞಾನವಿಲ್ಲ. ಅವು ಭಕ್ತಿಮಾರ್ಗದ ಶಾಸ್ತ್ರಗಳಾಗಿವೆ. ಕೇವಲ ಪೂಜೆ ಮಾಡುತ್ತಿರುತ್ತಾರೆ. ಆದರೆ ರಚಯಿತ ಮತ್ತು ರಚನೆಯ ಜ್ಞಾನವು ಸ್ವಲ್ಪವೂ ಇಲ್ಲ. ಆದ್ದರಿಂದಲೇ ಋಷಿ, ಮುನಿ ಮುಂತಾದವರೆಲ್ಲರೂ ನಾವು ರಚಯಿತ ಮತ್ತು ರಚನೆಯ ಜ್ಞಾನವನ್ನು ತಿಳಿದುಕೊಂಡಿಲ್ಲ ಎಂದು ಹೇಳುತ್ತಿದ್ದರು. ತಿಳಿಸುವವರು ಒಬ್ಬ ತಂದೆಯಾಗಿದ್ದಾರೆ. ಅಂದಮೇಲೆ ಋಷಿ, ಮುನಿಗಳು ಎಲ್ಲಿಂದ ತಿಳಿದುಕೊಳ್ಳುವರು! ಈಗ ನೀವು ತಂದೆಯ ಮುಖಾಂತರ ಕೇಳುತ್ತೀರಿ ನಂತರ ಈ ಜ್ಞಾನವು

ಪ್ರಾಯಃಲೋಪವಾಗಿಬಿಡುತ್ತದೆ. ಈ ಜ್ಞಾನವನ್ನು ನೀವು ಮಕ್ಕಳ ವಿನಃ ಬೇರೆ ಯಾರೂ ತಿಳಿದುಕೊಂಡಿಲ್ಲ. ನಿಮಗೆ ಎಷ್ಟು ದೊಡ್ಡ ಜ್ಞಾನವು ಸಿಗುತ್ತದೆ. ಅಂದಮೇಲೆ ನೀವು ಮಕ್ಕಳಿಗೆ ಎಷ್ಟೊಂದು ಖುಷಿ ಇರಬೇಕು. ಮನುಷ್ಯರು ವೈದ್ಯಕೀಯ ಮುಂತಾದ ವಿದ್ಯೆಯನ್ನು ಓದಲು ಅಥವಾ ಕಲಿಯಲು ವಿದೇಶಕ್ಕೆ ಹೋಗುತ್ತಾರೆ. ನಿಮ್ಮನ್ನಂತೂ ತಂದೆಯು ಇಲ್ಲಿ ಈ ರೀತಿ ಮಾಡುತ್ತಾರೆ ಸತ್ಯಯುಗದಲ್ಲಿ ಈ ವೈದ್ಯರು ಮುಂತಾದವರ ಅವಶ್ಯಕತೆ ಇರುವುದಿಲ್ಲ. ಬೇಹದ್ದಿನ ತಂದೆಯು ಯಾರು ಜ್ಞಾನಸಾಗರರಾಗಿದ್ದಾರೆ ಅವರ ಮೂಲಕ ನಾವು ಎಲ್ಲವನ್ನು ಅರಿತುಕೊಂಡುಬಿಡುತ್ತೇವೆ. ನಾವು ಅವರ ಸಂತಾನರಾಗಿದ್ದೇವೆ ಎಂದಾಗ ಜ್ಞಾನದಿಂದ ಬುದ್ಧಿಯು ಎಷ್ಟು ಸಂಪನ್ನವಾಗಿರಬೇಕು! ಎಷ್ಟೊಂದು ಖುಷಿ ಇರಬೇಕು. ನಾವು ತಿಳಿದುಕೊಳ್ಳದೆ ಇರುವ ಯಾವುದೇ ವಸ್ತುವಿಲ್ಲ. ಮನುಷ್ಯರು ಏನೆಲ್ಲವನ್ನು ಓದುತ್ತಾರೆ, ಅದು ಏನೇನೂ ಅಲ್ಲ. ಭಕ್ತಿಮಾರ್ಗದ ಶಾಸ್ತ್ರ ಇತ್ಯಾದಿಗಳನ್ನು ಎಷ್ಟೊಂದು ಓದುತ್ತಾರೆ ಆದರೆ ಈ ಸೃಷ್ಟಿಚಕ್ರವು ಹೇಗೆ ಸುತ್ತುತ್ತದೆ ಎಂದು ಯಾರಿಗೂ ಗೊತ್ತಿಲ್ಲ. ನೀವು ಮಕ್ಕಳು ಈಗ ಮಾಸ್ಟರ್ ಜ್ಞಾನಪೂರ್ಣರಾಗುತ್ತೀರಿ. ಸಾರರೂಪದಲ್ಲಂತೂ ಎಲ್ಲವನ್ನೂ ತಿಳಿದುಕೊಂಡಿದ್ದೀರಿ. ಈಗ ಕೇವಲ ತಮೋಪ್ರಧಾನ ಆತ್ಮಗಳನ್ನು ಸತೋಪ್ರಧಾನವನ್ನಾಗಿ ಮಾಡಿಕೊಳ್ಳಬೇಕಾಗಿದೆ. ಕೆಲವರು ತಮೋಪ್ರಧಾನದಿಂದ ತಮೋ ಆಗಿದ್ದಾರೆ, ಕೆಲವರು ತಮೋದಿಂದ ರಜೋ ಆಗಿದ್ದಾರೆ, ಇನ್ನೂ ಕೆಲವರು ರಜೋದಿಂದ ಸತೋ ಆಗಿದ್ದಾರೆ. ಸತೋಪ್ರಧಾನರೆಂದು ಹೇಳುವುದಿಲ್ಲ. ಯಾವಾಗ ಸಂಪೂರ್ಣ ಸತೋಪ್ರಧಾನರಾಗಿರುತ್ತೀರಿ ಆಗ ನಂಬರ್ವಾರ್ ಪುರುಷಾರ್ಥದನುಸಾರ ಕರ್ಮಾತೀತ ಸ್ಥಿತಿಯು ಬಂದುಬಿಡುವುದು. ಆಗ ರಾಜ್ಯಭಾರ ಮಾಡಲು ಹೊಸ ಪ್ರಪಂಚವು ಬೇಕು ಆದ್ದರಿಂದ ಹಳೆಯ ಪ್ರಪಂಚದ ವಿನಾಶ ಆಗುತ್ತದೆ. ಯಾವಾಗ ಈ ಯಜ್ಞವು ಪೂರ್ಣ ಆಗುವುದೋ ಆಗ ಇಡೀ ಹಳೆಯ ಪ್ರಪಂಚ ಆಹುತಿ ಆಗುವುದು. ಈ ವಿದ್ಯೆಯು ಮುಕ್ತಾಯವಾಗುವುದು ನಂತರ ನಂಬರ್ವಾರ್ ಪುರುಷಾರ್ಥದನುಸಾರ ಕರ್ಮಾತೀತ ಸ್ಥಿತಿಯನ್ನು ಪಡೆಯುತ್ತಾರೆ. ಹೇಗೆ ಅಲ್ಲಿಯೂ ಸಹ ಪರೀಕ್ಷೆಯನ್ನು ತೇರ್ಗಡೆ ಮಾಡಿದ ಮೇಲೆ ವರ್ಗಾವಣೆ ಆಗುತ್ತಾರೆ, ಅದೇ ರೀತಿ ನೀವೂ ಸಹ ಮೃತ್ಯುಲೋಕದಿಂದ ವರ್ಗಾವಣೆ ಆಗಿ ಅಮರಲೋಕಕ್ಕೆ ಹೊರಟುಹೋಗುತ್ತೀರಿ. ನಾವು ಅಮರಲೋಕದಲ್ಲಿದ್ದವು ನಂತರ 84 ಜನ್ಮಗಳನ್ನು ತೆಗೆದುಕೊಳ್ಳುತ್ತಾ-ತೆಗೆದುಕೊಳ್ಳುತ್ತಾ ಮೃತ್ಯು ಲೋಕಕ್ಕೆ ಬಂದುಬಿಟ್ಟಿದ್ದೇವೆ.

ನಾವೀಗ ಓದುತ್ತಿದ್ದೇವೆ ನಂತರ ಅಮರಲೋಕದಲ್ಲಿ ಹೋಗಿ ದೇವೀ-ದೇವತೆಗಳಾಗುತ್ತೇವೆ ಎಂದು ಈಗ ನೀವು ಹೇಳುತ್ತೀರಿ. ತಂದೆಯೇ ಮನುಷ್ಯರಿಂದ ದೇವತೆಗಳನ್ನಾಗಿ ಮಾಡುತ್ತಾರೆ. ಪತಿತರನ್ನು ಪಾವನ ದೇವೀ-ದೇವತೆಗಳನ್ನಾಗಿ ಯಾರು ಮಾಡುವವರು? ದೇವೀ-ದೇವತೆಗಳನ್ನಾಗಿ ಮಾಡಲು ಇಲ್ಲಿ ದೇವತೆಗಳಂತೂ ಯಾರೂ ಇಲ್ಲ. ಲಕ್ಷ್ಮೀ-ನಾರಾಯಣರು ಬೇಕಲ್ಲವೇ. ಅವರಂತೂ ಇಲ್ಲಿ ಇರುವುದೇ ಇಲ್ಲ. ಈ ಸಮಯದಲ್ಲಿ ತಂದೆಯೇ ಬಂದು ತಿಳಿಸುತ್ತಾರೆ ಎಂದು ನೀವು ಮಕ್ಕಳಿಗೆ ಗೊತ್ತಿದೆ. ಸ್ವರ್ಗದ ರಾಜ್ಯಭಾಗ್ಯವನ್ನು ಕೊಡುತ್ತಾರೆ. ಇಲ್ಲಿಯೇ ಸ್ವರ್ಗವಿತ್ತು, ಲಕ್ಷ್ಮೀ-ನಾರಾಯಣರ ರಾಜ್ಯವಿತ್ತಲ್ಲವೇ. ಇವರ ಈ ರಾಜಧಾನಿಯನ್ನು ಯಾರು ಸ್ಥಾಪಿಸಿದರು? ಸ್ವರ್ಗದ ರಚಯಿತ ತಂದೆಯೇ ಪ್ಯಾರಡೈಸ್(ಸ್ವರ್ಗ) ಸತ್ಯಯುಗ ಸ್ಥಾಪನೆ ಮಾಡಿದರು. ಎಲ್ಲಿ ದೇವೀ-ದೇವತೆಗಳು ರಾಜ್ಯ ಮಾಡುತ್ತಿದ್ದರು ಅಲ್ಲಿ ಯಾವುದೇ ಬೇರೆ ಖಂಡವಿರಲಿಲ್ಲ. ಭಾರತ ಒಂದೇ ಇತ್ತು. ನಾವು ಯಾವಾಗ ರಾಜ್ಯ ಮಾಡುತ್ತೇವೋ ಆಗ ಅನ್ಯರು ಯಾರೂ ಇರುವುದಿಲ್ಲ ಎನ್ನುವುದು ನಿಮ್ಮ ಬುದ್ಧಿಯಲ್ಲಿ ಇದೆ. ನಿಮ್ಮ ಬುದ್ಧಿಯಲ್ಲಿ ಇಡೀ ವೃಕ್ಷದ ಜ್ಞಾನವಿದೆ. ಈ ವೃಕ್ಷದ ಬೀಜವು ಮೇಲಿದ್ದಾರೆ. ಅವರು ಸತ್ಯ ಚೈತನ್ಯವಾಗಿದ್ದಾರೆ. ಆತ್ಮವು ಅವಿನಾಶಿಯಾಗಿದೆ, ತಂದೆಯು ಅವಿನಾಶಿಯಾಗಿದ್ದಾರೆ. ಯಾವ ಜ್ಞಾನವು ತಂದೆಯಲ್ಲಿ ಇದೆಯೋ ಅದನ್ನು ತಂದೆಯು ನಿಮಗೆ ತಿಳಿಸುತ್ತಾರೆ. ಇಡೀ ವೃಕ್ಷವು ನಿಂತಿದೆ, ಇದರಲ್ಲಿ ತಂದೆಯು ಮೇಲಿದ್ದಾರೆ. ಈ ಸಮಯದಲ್ಲಿ ಮನುಷ್ಯರು ತಮೋಪ್ರಧಾನ ಮುಳ್ಳುಗಳಾಗಿದ್ದಾರೆ. ವೃಕ್ಷವು ಹಳೆಯದಾದಾಗ ಹೇಗೆ ಒಣಗಿಹೋಗುತ್ತದೆ, ಆದ್ದರಿಂದ ಇದನ್ನು ಮುಳ್ಳಿನಕಾಡೆಂದು ಕರೆಯಲಾಗುತ್ತದೆ. ಸತ್ಯಯುಗದಲ್ಲಿ ಹೂದೋಟವಾಗಿರುತ್ತದೆ. ತಂದೆಯು ಹೂದೋಟದ ಮಾಲೀಕ ಆಗಿದ್ದಾರೆ. ಕೆಲವರಿಗೆ ಅಂಬಿಗ, ಕೆಲವರಿಗೆ ಹೂದೋಟದ ಮಾಲೀಕ, ಇನ್ನೂ ಕೆಲವರಿಗೆ ಮಾಲಿ ಎಂದು ಹೇಳುತ್ತಾರೆ. ತಂದೆಯು ಅಂಬಿಗನಾಗಿದ್ದಾರೆ. ನೀವೂ ಸಹ ಈಗ ದೋಣಿ ನಡೆಸುವುದನ್ನು ಕಲಿಯುತ್ತಿದ್ದೀರಿ. ಪ್ರತಿಯೊಬ್ಬರ ದೋಣಿಯು ಬಹಳ ಹಳೆಯದಾಗಿಬಿಟ್ಟಿದೆ. ದೋಣಿಯು ಶರೀರ ಮತ್ತು ಆತ್ಮ ಎರಡರಿಂದ ಮಾಡಲ್ಪಟ್ಟಿದೆ. ನನ್ನ ಜೀವನದ ದೋಣಿಯನ್ನು ಪಾರು ಮಾಡಿ ಎಂದು ಹೇಳುತ್ತಾರೆ. ಈಗ ದೋಣಿಯು ಹಳೆಯದಾಗಿದೆ ಅಂದಾಗ ಶರೀರವು ಹಳೆಯದು ಈಗ ಅದು ಹೇಗೆ ಪಾರಾಗುವುದು ಮತ್ತು ಎಲ್ಲಿಗೆ ಹೋಗುವುದು? ಎಲ್ಲಿಗೆ ಪಾರಾಗುವುದು ಎಂದು ಯಾವುದಕ್ಕೆ ಹೇಳಲಾಗುತ್ತದೆ ಎಂದು ನಿಮಗೆ ಗೊತ್ತಿದೆ. ಮುಕ್ತಿಧಾಮ, ಜೀವನ್ಮುಕ್ತಿಧಾಮ ಎಂದರೆ ಯಾವುದೆಂದೂ ಸಹ ಗೊತ್ತಿದೆ. ಅವಶ್ಯವಾಗಿ ಈಗ ತಂದೆಯೇ ದೂರ ಕರೆದುಕೊಂಡು ಹೋಗುತ್ತಾರೆ. ದುಃಖಧಾಮದಿಂದ ಸುಖಧಾಮ, ವಿಷಯಸಾಗರದಿಂದ ಕ್ಷೀರಸಾಗರದೆಡೆಗೆ ಕರೆದುಕೊಂಡುಹೋಗುತ್ತಾರೆ. ನನ್ನ ದೋಣಿಯನ್ನು ಪಾರು ಮಾಡಿ, ಹೂದೋಟದ ಮಾಲೀಕನೇ ಬನ್ನಿ. ಮುಳ್ಳುಗಳನ್ನು ಹೂಗಳನ್ನಾಗಿ ಮಾಡಿ ಎಂದು ಕೇವಲ ಮನುಷ್ಯರು ಹಾಡುತ್ತಾರೆ ಆದರೆ ತಿಳಿದುಕೊಂಡಿಲ್ಲ. ನಿಮಗೂ ಸಹ ಮೊದಲು ತಿಳಿದಿರಲಿಲ್ಲ. ಈಗ ಮೂಲವತನ, ಸೂಕ್ಷ್ಮವತನ ಮತ್ತು ಸತ್ಯಯುಗದಿಂದ ಹಿಡಿದು ಕಲಿಯುದವರೆಗೆ ಎಲ್ಲವನ್ನು ತಿಳಿದುಕೊಂಡಿದ್ದೀರಿ, ತಂದೆಗೆ ಏನು ಗೊತ್ತಿದೆಯೋ ಅದನ್ನೇ ತಿಳಿಸುತ್ತಾರೆ. ನಿಮ್ಮಲ್ಲಿ ಜ್ಞಾನವು ಹನಿಯುತ್ತಿರಲಿ ಆಗ ಸದಾ ಖುಷಿಯಲ್ಲಿ ಇರುತ್ತೀರಿ. ಯಾವುದೇ ಚಿಂತೆಯ ಮಾತೇ ಇರುವುದಿಲ್ಲ. ಚಿಂತೆಯಿಂದ ಮುಕ್ತರಾಗಿಬಿಡುತ್ತೀರಿ.

ನಿಮಗೆ ತಿಳಿದಿದೆ ನಮ್ಮನ್ನು ತಂದೆಯು ಕರೆದುಕೊಂಡು ಹೋಗುತ್ತಾರೆ, ಈಗ ನಾವು ಮಗ ತಂದೆಯಸಮಾನ ಆಗುತ್ತಾನಲ್ಲವೆ. ತಂದೆಯು ಜ್ಞಾನಪೂರ್ಣರಾಗಿರುವ ಕಾರಣ ನಿಮ್ಮನ್ನೂ ಸಹ ಜ್ಞಾನಪೂರ್ಣರನ್ನಾಗಿ ಮಾಡುತ್ತಾರೆ. ಆತ್ಮಗಳ ಸಂಬಂಧವಿರುವುದೇ ಪರಮಾತ್ಮ ತಂದೆಯೊಂದಿಗೆ. ತಂದೆಯಲ್ಲಿ ಯಾವ ಜ್ಞಾನವಿದೆಯೋ ಅದನ್ನು ನಾವಾತ್ಮಗಳಿಗೆ ಕೊಡುತ್ತಾರೆಂದು ಆತ್ಮವು ಹೇಳುತ್ತದೆ. ನೀವು ಆತ್ಮೀಯ ತಂದೆಯ ಆತ್ಮೀಯ ಮಕ್ಕಳಾಗಿದ್ದೀರಿ. ಇದೂ ಸಹ ಹೊಸ ಮಾತಲ್ಲವೆ. ಇದೂ ಸಹ ತಂದೆಯ ವಿನಃ ಬೇರೆ ಯಾರೂ ತಿಳಿಸಲು ಸಾಧ್ಯವಿಲ್ಲ. ಆ ನಿರಾಕಾರ ತಂದೆಯೂ ಸಹ ಸಾಕಾರದ ಆಧಾರದಿಂದ ತಿಳಿಸುತ್ತಾರೆ. ಇಲ್ಲವೆಂದರೆ ನೀವು ಮಕ್ಕಳು ಕೇಳಲು ಸಾಧ್ಯ ಆಗುವುದಿಲ್ಲ. ತಂದೆಯು ಮಕ್ಕಳನ್ನು ತಮ್ಮ ಸಮಾನರನ್ನಾಗಿ ಮಾಡುತ್ತಾರೆ. ದುಃಖಹರ್ತ-ಸುಖಕರ್ತ ಆ ತಂದೆಯಾಗಿದ್ದಾರೆ. ಯಾವುದು ಅವರ ಮಹಿಮೆ ಆಗಿದೆಯೋ ಅದು ನಿಮ್ಮದೂ ಆಗಿದೆ. ಯಾವುದೇ ಅಂತರವಿಲ್ಲ. ಉಳಿದಂತೆ ಇನ್ನೇನು ಅಂತರವಿದೆ? ನಾನು ಜನನ-ಮರಣದಲ್ಲಿ ಬರುವುದಿಲ್ಲ, ನೀವು ಬರುತ್ತೀರಿ. ನನ್ನನ್ನು ಜ್ಞಾನಸಾಗಾರನೆಂದು ಹೇಳುತ್ತಾರೆ ಅಂದಮೇಲೆ ನಾನು ನೀವು ಮಕ್ಕಳಿಗೆ ಜ್ಞಾನ ಕೊಡುತ್ತೇನೆ. ನಾನು ಸುಖಸಾಗರ, ಪವಿತ್ರತೆಯಸಾಗರ, ಶಾಂತಿಯ ಸಾಗರನಾಗಿದ್ದೇನೆ, ಆದ್ದರಿಂದ ನಿಮಗೂ ಸಹ ಈ ಆಸ್ತಿಯನ್ನು ಕೊಡುತ್ತೇನೆ.

ನಿಮಗೆ ಗೊತ್ತಿದೆ-ಈ ಇಡೀ ಚಕ್ರವು ಮತ್ತೆ 5000 ವರ್ಷಗಳ ನಂತರ ಸುತ್ತುವುದು. ಈ ಜ್ಞಾನವು ಸಂಪಾದನೆಗೆ ಮೂಲವಾಗಿದೆ. ಎಷ್ಟು ಓದುತ್ತೀರೋ ಅಷ್ಟು ಈ ಜ್ಞಾನದಿಂದ ಸಂಪಾದನೆ ಆಗುತ್ತದೆ. ಇದು ಜ್ಞಾನವು ಆಗಿದೆ, ವ್ಯಾಪಾರವೂ ಆಗಿದೆ. ಚಿನ್ನದ ವ್ಯಾಪಾರಿಗಳು ಕರಾರು ಪತ್ರವನ್ನು ಕೊಡುತ್ತಾರೆ. ನೀವೇನು ಕೊಡುತ್ತೀರಿ? ಕಸ-ಕಡ್ಡಿ (ಹಳೆಯವಸ್ತುಗಳು) ಸತ್ತ ನಂತರ ಸ್ಮಶಾನದ ಕಾವಲುಗಾರರಿಗೆ ಹಳೆಯ ವಸ್ತುಗಳನ್ನೇ ಕೊಡುತ್ತಾರೆ. ನೀವಂತೂ ಜೀವಿಸಿದ್ದಂತೆಯೇ ಕೊಡಬೇಕಾಗುತ್ತದೆ. ಈಶ್ವರಾರ್ಥವಾಗಿ ಕೊಡುತ್ತಾರೆ ಅಂದಮೇಲೆ ಈಗ ಈಶ್ವರನಿಗೆ ತಮ್ಮ ಹಳೆಯ ಹಾಸಿಗೆ ಮುಂತಾದುವುಗಳನ್ನು ಕೊಡುತ್ತೀರಾ. ತಂದೆಯು ತಿಳಿಸುತ್ತಾರೆ - ನೀವು ಶರೀರ ಬಿಡುವ ಮುಂಚೆಯೇ ತಂದೆಗೆ ಎಲ್ಲವನ್ನು ಕೊಟ್ಟುಬಿಡಿ. ಈ ಹಳೆಯ ವಸ್ತುಗಳು ನಿಮ್ಮ ಯಾವುದೇ ಕೆಲಸಕ್ಕೆ ಬರುವುದಿಲ್ಲ. ಭಲೆ ಯಾರು ಎಷ್ಟೇ ಸಾಹುಕಾರಿರಬಹುದು ಆದರೆ ಎಷ್ಟು ದಿನಗಳಿಗೆ ಆಗಬಹುದು? ಒಂದು ಜನ್ಮಕ್ಕೆ ನಂತರ ಕರ್ಮಗಳನುಸಾರ ಎಲ್ಲಿ ಹೋಗಿ ಜನ್ಮ ಪಡೆಯುತ್ತಾರೆಯೋ ಗೊತ್ತಿಲ್ಲ. ನೀವಂತೂ ತಂದೆಯಿಂದ ಪುರುಷಾರ್ಥದನುಸಾರ 21 ಜನ್ಮಗಳಿಗಾಗಿ ಪಡೆಯುತ್ತೀರಿ.

ಇದು ಆತ್ಮಿಕ ಸೇವೆ ಆಗಿದೆ. ಶರೀರಿಕ ಸೇವೆಯಂತೂ ಇಡೀ ಪ್ರಪಂಚದವರು ತಿಳಿದುಕೊಂಡಿದ್ದಾರೆ ಆದರೆ ಆತ್ಮಿಕ ಸೇವೆಯನ್ನಂತೂ ಯಾರೂ ತಿಳಿದುಕೊಂಡಿಲ್ಲ. ಪರಮಾತ್ಮನೇ ಬಂದು ಜ್ಞಾನವನ್ನು ಕೊಡುತ್ತಾರೆ. ಪರಮಾತ್ಮನ ಜಯಂತಿಯನ್ನು ಆಚರಿಸುತ್ತಾರೆ ಅವರನ್ನೇ ಸುಖದ ಸಾಗರ, ಶಾಂತಿಯ ಸಾಗರ, ದುಃಖಹರ್ತ-ಸುಖಕರ್ತ ಎಂದು ಹೇಳುತ್ತಾರೆ. ಶಿವ ಎನ್ನುವ ಹೆಸರಿದೆಯಲ್ಲವೆ. ಜಯಂತಿಯನ್ನು ಆಚರಿಸುತ್ತಾರೆ ಆದರೆ ಬುದ್ಧಿಯಲ್ಲಿ ಏನೂ ಇಲ್ಲ. ತಂದಯೇ ಇದನ್ನು ತಿಳಿಸುತ್ತಾರೆ. ಪುನಃ 5000 ವರ್ಷದ ನಂತರ ತಿಳಿಸುತ್ತಾರೆ. ಈ ಜ್ಞಾನವು ಸತ್ಯಯುಗದಲ್ಲಿ ಇರುವುದಿಲ್ಲ ಏಕೆಂದರೆ ಆತ್ಮಗಳು ಸತೋಪ್ರಧಾನರಾಗಿರುತ್ತಾರೆ. ಜ್ಞಾನದಿಂದಲೇ ಅವರು ಆ ರೀತಿ ಆಗುತ್ತಾರೆ. ಇವು ಹೊಸ ಮಾತುಗಳಾಗಿವೆಯಲ್ಲವೆ. ಲಕ್ಷ್ಮೀ-ನಾರಾಯಣರ ಮಂದಿರವನ್ನು ನಾವು ಏಕೆ ಮಾಡಿಸುತ್ತೇವೆ. ಅವರಿಗೆ ರಾಜ್ಯವನ್ನು ಯಾರು ಕೊಟ್ಟರು? ಆ ಪದವಿಯನ್ನು ಹೇಗೆ ಪಡೆದರು? ಎಂದು ಮಂದಿರವನ್ನು ಕಟ್ಟಿಸುವವರೂ ಸಹ ತಿಳಿದುಕೊಂಡಿಲ್ಲ. ಕರ್ಮಗಳ ಫಲವಾಗಿದೆ ಎಂದು ಹೇಳುತ್ತಾರೆ. ಈಗ ತಂದೆಯು ಕುಳಿತು ಕರ್ಮ-ಅಕರ್ಮ-ವಿಕರ್ಮಗಳ ಗತಿಯ ರಹಸ್ಯಗಳನ್ನು ತಿಳಿಸುತ್ತಾರೆ ಅವರೂ ಸಹ ಈ ಜ್ಞಾನವನ್ನು ಕೇಳಿರ ಬಹುದು. ಇದು ಭಗವಾನುವಾಚ ಆಗಿದೆಯಲ್ಲವೆ. ಗೀತೆಯಿಂದಲೇ ಆದಿ-ಸನಾತನ ದೇವೀ-ದೇವತಾ ಧರ್ಮದ ಸ್ಥಾಪನೆ ಆಯಿತು. ಅಲ್ಲಿ ಬಹಳ ಕಡಿಮೆ ಜನ ಮನುಷ್ಯರಿರುತ್ತಾರೆ. ಉಳಿದ ಎಲ್ಲಾ ಹಳೆಯ ಸೃಷ್ಟಿಯು ಎಲ್ಲಿಗೆ ಹೋಯಿತು? ಅವಶ್ಯವಾಗಿ ವಿನಾಶವಾಗಿರಬೇಕು. ಮಹಾಭಾರತದ ಯುದ್ಧದ ಗಾಯನವೂ ಇದೆ. ಗಿರಿಧರ ಕವಿರಾಜನೆಂದು ಹೇಳುತ್ತಾರೆ. ಈಗ ಗಿರಿಧರನೆಂದು ಕೃಷ್ಣನಿಗೆ ಹೇಳುತ್ತಾರೆ ಅಂದಮೇಲೆ ಕವಿ ಯಾರು? ಶಿವತಂದೆಗೆ ಕವಿ ಎಂದು ಹೇಳಲಾಗುತ್ತದೆ. ಕವಿ ಎಂದರೆ ತಿಳಿಸುವವರೆಂದರ್ಥ.

ಬಹಳ ಆಪತ್ತು ಬರಲಿವೆ ಎಂದು ನಿಮಗೆ ಗೊತ್ತಿದೆ. ಹಳೆಯ ಪ್ರಪಂಚದ ವಿನಾಶಕ್ಕಾಗಿ ಏನೆಲ್ಲಾ ವಸ್ತುಗಳನ್ನು ತಯಾರಿಸುತ್ತಿದ್ದಾರೆ ಇದು ಅದೇ ಮಹಾಭಾರತ ಯುದ್ಧವಾಗಿದೆ. ಈಗ ಭಗವಂತ ಬಂದು ರುದ್ರ ಜ್ಞಾನಯಜ್ಞವನ್ನು ರಚಿಸುತ್ತಾರೆ. ಯಜ್ಞವನ್ನು ಏತಕ್ಕಾಗಿ ರಚಿಸುತ್ತಾರೆ? ಯಜ್ಞವನ್ನು ಸುಖ-ಶಾಂತಿಗಾಗಿಯೇ ರಚಿಸಲಾಗುತ್ತದೆ. ತಂದೆಯು ಎಲ್ಲರ ದುಃಖ ಹರ್ತ, ಸುಖಕರ್ತನಾಗಿದ್ದಾರೆ ಅಂದಾಗ ಈ ಜ್ಞಾನ ಯಜ್ಞದಲ್ಲಿ ಇಡೀ ಹಳೆಯ ಸೃಷ್ಟಿಯು ಸ್ವಾಹಾ ಆಗಿಬಿಡುತ್ತದೆ. ನೀವು ಮಕ್ಕಳಿಗೆ ಗೊತ್ತಿದೆ - ನಾವು ಬ್ರಾಹ್ಮಣರು ಯಜ್ಞ ಸೇವಕರಾಗಿದ್ದೇವೆ. ನಾವು ಬ್ರಾಹ್ಮಣರು ಬ್ರಹ್ಮಾರವರ ಸತ್ಯಮುಖವಂಶಾವಾಳಿ ಆಗಿದ್ದೇವೆ ಅಂದಮೇಲೆ ತಂದೆಯು ಮುಖದಿಂದ ಏನು ಹೇಳುವರೋ ಅದನ್ನು ಪಾಲಿಸಬೇಕು. ಶ್ರೀ ಶ್ರೀ ಯವರ ಶ್ರೇಷ್ಠ ಮತದಿಂದಲೇ ನಾವು ಶ್ರೇಷ್ಠರಾಗಿ ರುದ್ರ ಮಾಲೆಯ ಮಣಿಗಳಾಗುತ್ತೇವೆ. ವಂಶಾವಳಿಗಳನ್ನು ಮಾಡುತ್ತಾರೆ - ವಾಸವಾನಿ, ಕೃಪಲಾನಿ ಕುಲ ತಂದೆಯು ಮೇಲಿದ್ದಾರೆ, ಅವರದು ನಿರಾಕಾರಿ ವಂಶವಾಗಿದೆ. ನಿರಾಕಾರಿ ವಂಶಾವಳಿಯಾಗಿದೆ ನಂತರ ಸಾಕಾರಿ ವಂಶಾವಳಿ ಆಗುತ್ತದೆ. ಅದರಲ್ಲಿ ಮೊದಲನೆಯದಾಗಿ ಪ್ರಜಾಪಿತನಾಗಿದ್ದಾರೆ. ಅಂದಾಗ ಅದು ಶಾರೀರಿಕವಾಗಿದೆ ಮತ್ತು ಇದು ಆತ್ಮಿಕವಾಗಿದೆ. ಆತ್ಮಿಕ ತಂದೆಯು

ಬಂದು ಪ್ರಜಾಪಿತಬ್ರಹ್ಮಾರವರ ಮುಖಾಂತರ ರಚನೆಯನ್ನು ರಚಿಸುತ್ತಾರೆ ಅವರನ್ನೇ ಹೇ ಪತಿತಪಾವನ ಬನ್ನಿ ಹಳೆಯ ಪತಿತ ಪ್ರಪಂಚವನ್ನು ಪಾವನವನ್ನಾಗಿ ಮಾಡಲು ಬನ್ನಿ ಎಂದು ಕರೆಯುತ್ತಾರೆ. ತಂದೆಯು ಹೊಸ ಪ್ರಪಂಚವನ್ನು ಸೃಷ್ಟಿಸುವುದಿಲ್ಲ. ಪ್ರಳಯವೂ ಆಗುವುದಿಲ್ಲ ಅಂದರೆ ವಿಶ್ವದ ಇತಿಹಾಸ, ಭೂಗೋಳವು ಪುನರಾವರ್ತನೆ ಆಗುತ್ತದೆ. 84 ಜನ್ಮಗಳ ಚಕ್ರವು ಪುನಃ ಪ್ರಾರಂಭವಾಗುತ್ತದೆ. ಬೇಹದ್ದಿನ ತಂದೆಯಿಂದ ಬೇಹದ್ದಿನ ಜ್ಞಾನವು ಸಿಗುತ್ತದೆ, ಬೇಹದ್ದಿನ ಆಸ್ತಿಯು ಸಿಗುತ್ತದೆ, ಬೇಹದ್ದಿನ ತಂದೆಯನ್ನು ಹೇ ಭಗವಂತನೇ ಎಂದು ಹೇಳಿ ಎಲ್ಲರೂ ನೆನಪು ಮಾಡುತ್ತಾರೆ. ಹೇ ಈಶ್ವರ! ಹೇ ಪ್ರಭು! ಎಂದು ಹೇಳಿದಾಗ ಯಾವುದೇ ಚಿತ್ರ ನೆನಪಿಗೆ ಬರುವುದಿಲ್ಲ. ನಿರಾಕಾರ ತಂದೆಯ ನೆನಪು ಬರುತ್ತದೆ. ಭಗವಂತನನ್ನು ನೆನಪು ಮಾಡಿ ಎಂದೂ ಸಹ ಹೇಳುತ್ತಾರೆ ಏಕೆಂದರೆ ತಂದೆಯಾಗಿದ್ದಾರಲ್ಲವೆ. ನಾವೆಲ್ಲರೂ ಸಹೋದರರಾಗಿದ್ದೇವೆ. ಎಲ್ಲರೂ ಸಹೋದರರೆಂದು ಆತ್ಮಗಳ ರೂಪದಲ್ಲಿ ಹೇಳುತ್ತಾರೆ. ಹೇ ಪತಿತಪಾವನ, ದುಃಖಹರ್ತ-ಸುಖಕರ್ತ ಮುಕ್ತಿದಾತ ಬನ್ನಿ ನಮಗೆ ಮಾರ್ಗದರ್ಶನ ತೋರಿಸಿ, ಮನೆಯು ಮರೆತುಹೋಗಿದೆ, ನೆನಪಿದೆ ಆದರೆ ಹೋಗಲು ಸಾಧ್ಯವಿಲ್ಲವೆಂದು ಎಲ್ಲರೂ ಕರೆಯುತ್ತಾರೆ. ಹೇಗೆ ಆತ್ಮರೂಪಿ ಜ್ಯೋತಿಯಲ್ಲಿ ಎಣ್ಣೆ ಬೀಳುತ್ತಾ ಹೋಗುತ್ತದೆ, ಆತ್ಮ ಅವಿನಾಶಿಯಾಗಿದೆಯಲ್ಲವೆ, ಆದ್ದರಿಂದ ಆತ್ಮ ಜ್ಯೋತಿಯು ಪೂರ್ಣ ನಂದಿಹೋಗುವುದಿಲ್ಲ ಅಂದಾಗ ಈಗ ಅದಕ್ಕೆ ಯೋಗಬಲದ ಎಣ್ಣೆಯನ್ನು ಹಾಕಬೇಕು. ಸದಾಕಾಲಕ್ಕೋಸ್ಕರ ದೀಪಮಾಲೆ ಬೆಳಕಾಗಿ ಬಿಡುವುದು. ದೀಪಮಾಲೆ ಎಂದರೆ ಮನೆ-ಮನೆಯಲ್ಲಿ ಪ್ರಕಾಶ ಅಂದಾಗ ದೀಪಮಾಲೆಯು ಎಲ್ಲಿ ಆಗುವುದು? ಸತ್ಯಯುಗದಲ್ಲಿ ಇಲ್ಲಲ್ಲ. ಇದೆಲ್ಲಾ ರಹಸ್ಯಗಳನ್ನು ನೀವು ತಿಳಿದುಕೊಳ್ಳುತ್ತೀರಿ. ನಿಮ್ಮ ಬಳಿ ಅಂಧಶ್ರದ್ಧೆ ಇಲ್ಲ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಚಿಂತೆಗಳಿಂದ ಮುಕ್ತರಾಗಲು ತಂದೆಯ ಸಮಾನ ಜ್ಞಾನ ಪೂರ್ಣರಾಗಬೇಕಾಗಿದೆ. ಬುದ್ಧಿಯಲ್ಲಿ ಸದಾ ಜ್ಞಾನದ ಸ್ಮರಣೆ ಮಾಡುತ್ತಿರಬೇಕು.

2. ಆತ್ಮಿಕ ಸೇವೆ ಮಾಡಿ ತಮ್ಮ ಪ್ರಾಲಬ್ಧವನ್ನು ರೂಪಿಸಿಕೊಳ್ಳಬೇಕಾಗಿದೆ. ಹಳೆಯದೆಲ್ಲವನ್ನು ವರ್ಗಾವಣೆ ಮಾಡಬೇಕಾಗಿದೆ.

ವರದಾನ: ಸರ್ವರ ಪ್ರತಿ ಶುಭ ಕಲ್ಯಾಣದ ಭಾವನೆ ಇಟ್ಟು ಪರಿವರ್ತನೆ ಮಾಡುವಂತಹ ಬೇಹದ್ದಿನ ಸೇವಾಧಾರಿ ಭವ.
ಬಹಳಷ್ಟು ಮಕ್ಕಳು ಬಾಪ್ದಾದಾರವರ ಮುಂದೆ ತಮ್ಮ ಇದೇ ಆಸೆ ಇಡುತ್ತಾರೆ ನಮ್ಮ ಇಂತಹ ಸಂಬಂಧಿ ಬದಲಾವಣೆ ಆಗಿ ಬಿಡಲಿ. ಮನೆಯವರು ನನ್ನ ಜೊತೆಗಾರರಾಗಿ ಬಿಡಲಿ ಎಂದು. ಆದರೆ ಕೇವಲ ಆ ಆತ್ಮಗಳನ್ನು ನಮ್ಮವರು ಎಂದು ತಿಳಿದು ಆಸೆ ಇಟ್ಟಿದ್ದೇ ಆದಲ್ಲಿ ಮಿತವಾದ ಗೋಡೆಯ ಕಾರಣ ನಿಮ್ಮ ಶುಭ ಕಲ್ಯಾಣದ ಭಾವನೆ ಆ ಆತ್ಮಗಳವರೆಗೂ ತಲುಪುವುದಿಲ್ಲ. ಬೇಹದ್ದಿನ ಸೇವಾಧಾರಿ ಸರ್ವರ ಪ್ರತಿ ಆತ್ಮಿಕ ಭಾವ ಅಥವಾ ಬೇಹದ್ದಿನ ಆತ್ಮಿಕ ದೃಷ್ಟಿ, ಸಹೋದರ-ಸಹೋದರನ ಸಂಬಂಧದ ವೃತ್ತಿಯಿಂದ ಶುಭ ಭಾವನೆ ಇಟ್ಟಿದ್ದೇ ಆದರೆ ಅದರ ಫಲ ಅವಶ್ಯವಾಗಿ ಪ್ರಾಪ್ತಿಯಾಗುವುದು. ಇದೇ ಮನಸಾ ಸೇವೆಯ ಯಥಾರ್ಥ ವಿಧಿಯಾಗಿದೆ.

ಸ್ಲೋಗನ್: ಜ್ಞಾನರೂಪಿ ಬಾಣವನ್ನು ಬುದ್ಧಿ ರೂಪಿ ಬತ್ತಳಿಕೆಯಲ್ಲಿ ತುಂಬಿಕೊಂಡು ಮಾಯೆಗೆ ಸವಾಲು ಹಾಕುವಂತಹವರೇ ಮಹಾವೀರ ಯೋದ್ಧ ಆಗಿದ್ದಾರೆ.